ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜೂನ್ 24, 2020**

## ಪತ್ರಿಕಾ ಪ್ರಕಟಣೆ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ

## ಹವಾ ನಿಯಂತ್ರಿತ ಬಸ್ಸುಗಳ ಪ್ರಾರಂಭ

**ಬೆಂಗಳೂರು, ಜೂನ್ 24 (ಕರ್ನಾಟಕ ವಾರ್ತೆ):**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಜೂನ್ 25 ರಿಂದ ಹವಾ ನಿಯಂತ್ರಿತ ಸಾರಿಗೆಗಳ ಕಾರ್ಯಾಚರಣೆಯನ್ನು ಮೊದಲ ಹಂತವಾಗಿ ಬೆಂಗಳೂರಿನಿಂದ ಮೈಸೂರು, ಮಂಗಳೂರು, ಕುಂದಾಪುರ, ಚಿಕ್ಕಮಗಳೂರು, ಮಡಿಕೇರಿ, ದಾವಣಗೆರೆ, ಶಿವಮೊಗ್ಗ,ವಿರಾಜಪೇಟೆಗೆ ಪ್ರಾರಂಭಿಸಲಾಗುತ್ತಿದೆ.

ಹವಾ ನಿಯಂತ್ರಿತ ಸಾರಿಗೆಗಳಲ್ಲಿ ಮಾರ್ಗಸೂಚಿಯನ್ವಯ ತಾಪಮಾನವನ್ನು 24 ರಿಂದ 25 ಸೆಂಟಿಗ್ರೇಡ್‌ನಲ್ಲಿ ನಿರ್ವಹಿಸಲಾಗುವುದು ಮತ್ತು ಕೋವಿಡ್–19 ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ರಾತ್ರಿ ಸಾರಿಗೆಗಳಲ್ಲಿ ಹೊದಿಕೆಗಳನ್ನು ನೀಡಲಾಗುವುದಿಲ್ಲ. ಪ್ರಯಾಣಿಕರೇ ತಮ್ಮ ಹೊದಿಕೆಗಳನ್ನು ತರಬೇಕು.

ಈ ಮೇಲ್ಕಂಡ ಮಾರ್ಗಗಳಲ್ಲಿ ಮುಂಗಡ ಆಸನಗಳನ್ನು www.ksrtc.in ವೆಬ್‌ಸೈಟ್ ಮತ್ತು ನಿಗಮದ/ಫ್ರಾಂಚೈಸಿ ಕೌಂಟರ್‌ಗಳ ಮುಖಾಂತರ ಕಾಯ್ದಿರಿಸಿ ಕೊಳ್ಳಬಹುದಾಗಿದೆ. ಪ್ರಯಾಣಿಕರು ಸದರಿ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**KSRTC - Operates A/C Buses**

**Bengaluru, June 24 (Karnataka Information) :**

Karnataka State Road Transport Corporation will commence operation of A/C Buses in phased manner with effect from25.06.2020.

In the I phase, services will be operated from Bengaluru to below mentioned places and to Bengaluru from those places.

1. Mysuru, 2. Mangaluru, 3. Kundapura, 4. Madikeri, 5. Chikkamagaluru,

6. Davanagere, 7. Shivamogga and 8. Virajpet

The temperature inside the buses will be maintained at 24-25 degree Celsius as per the norm. Further, as a precautionary measure to prevent spreading of Covid-19, blankets will not be provided in the night service buses. The passengers are requested to carry their own blankets.

Passengers can book tickets in advance online at www.ksrtc.inor through KSRTC/Franchisee advance reservation counters for the above services. The Passengers are requested to avail the above facilities says **CHIEF TRAFFIC MANAGER (Opn) to press**

**ಖಾಸಗಿ ಆಸ್ಪತ್ರೆಗಳ ಶೇ.50 ರಷ್ಟು ಹಾಸಿಗೆಗಳನ್ನು ಕೋವಿಡ್-19 ಸೋಂಕಿತ ವ್ಯಕ್ತಿಗಳಿಗೆ ಮೀಸಲಿಡಲು ಸರ್ಕಾರದಿಂದ ಆದೇಶ**

ಬೆಂಗಳೂರು, ಜೂನ್ 24 (ಕರ್ನಾಟಕ ವಾರ್ತೆ): ಕೋವಿಡ್-19 ಸೋಂಕಿತ ವ್ಯಕ್ತಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಎಲ್ಲರಿಗೂ ಚಿಕಿತ್ಸೆ ನೀಡುವ ಅಗತ್ಯವಿದ್ದು, ಪ್ರಸ್ತುತ ಸಾರ್ವಜನಿಕರೋಗ್ಯ ಸಂಸ್ಥೆಗಳಲ್ಲಿ ಮಾತ್ರ ಚಿಕಿತ್ಸೆ ನೀಡಲಾಗುತ್ತಿದೆ. ಕೋವಿಡ್-19 ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳು, ಕಾರ್ಪೊರೇಟ್ ಆಸ್ಪತ್ರೆಗಳು, ನರ್ಸಿಂಗ್ ಹೋಮ್ ಇತ್ಯಾದಿಗಳನ್ನು ಒಳಗೊಳ್ಳುವುದು ಕಡ್ಡಾಯವಾಗಿದ್ದು, ಕೆ.ಪಿ.ಎಂ.ಇ ಕಾಯ್ದೆಯಡಿ ನೋಂದಾಯಿಸಲಾದ ಖಾಸಗಿ ಆರೋಗ್ಯ ಪೂರೈಕೆದಾರರು (ಪಿಹೆಚ್‌ಪಿ) ಕೊವಿಡ್-19 ಒಳಗೊಳ್ಳುವುದು ಅಗತ್ಯವಾಗಿರುವುದರಿಂದ ಕೋವಿಡ್-19 ರೋಗಿಗಳಿಗೆ ಚಿಕಿತ್ಸೆ ನೀಡಲು ಸಾಮರ್ಥ್ಯ/ಸೌಲಭ್ಯ ಹೊಂದಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳ ಶೇ.50 ರಷ್ಟು ಹಾಸಿಗೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರ್ ಆದ ಕೋವಿಡ್ ರೋಗಿಗಳಿಗೆ ಮೀಸಲಿಡಲು ಸರ್ಕಾರವು ಆದೇಶ ಹೊರಡಿಸಿದೆ.

ರಾಷ್ಟ್ರಿಯ ವಿಪತ್ತು ನಿರ್ವಹಣಾ ಕಾಯಿದೆ 2005ರ ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಬಳಸಿಕೊಂಡು ಇನ್ನುಳಿದ ಶೇ.50 ರಷ್ಟು ಹಾಸಿಗೆಗಳನ್ನು ಖಾಸಗಿ ಆರೋಗ್ಯ ಪೂರೈಕೆದಾರರು (ಪಿಹೆಚ್‌ಪಿ) ಖಾಸಗಿ ರೋಗಿಗಳಿಗೆ ಮತ್ತು ವಿಮಾ ರೋಗಿಗಳಿಗೆ ಬಳಸಿಕೊಳ್ಳಬಹುದಾಗಿದೆ.

ಸಾರ್ವಜನಿಕಆರೋಗ್ಯ ಸಂಸ್ಥೆಗಳಿಂದ ರೆಫರಲ್ ಆದ ರೋಗಿಗಳಿಗೆ ಒಂದು ದಿನಕ್ಕೆ, ಒಬ್ಬರೋಗಿಗೆ ವಿಧಿಸಬೇಕಾದ ಚಿಕಿತ್ಸಾ ದರ ಮತ್ತು ರೆಫರಲ್ ಇಲ್ಲದೆ ತಾವೇ ನೇರವಾಗಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳಿಗೆ ವಿಧಿಸಬೇಕಾದ ಚಿಕಿತ್ಸೆಯ ದರಗಳ ಮಿತಿಯನ್ನು ಆಧಿಸೂಚನೆಯಲ್ಲಿ ನಿಗಧಿಪಡಿಸಿರುತ್ತದೆ.

ಸಾರ್ವಜನಿಕಆರೋಗ್ಯ ಸಂಸ್ಥೆಗಳಿಂದ ರೆಫರಲ್ ಪಡೆದು ಖಾಸಗಿ ಆಸ್ಪತ್ರೆಗೆ ಹೋಗುವ ಕೋವಿಡ್-19 ರೋಗಿಗಳಿಗೆ ಚಿಕಿತ್ಸೆ ಸಂಪೂರ್ಣ ಉಚಿತವಾಗಿದ್ದು, ಸರ್ಕಾರವೇ ಈ ವೆಚ್ಚವನ್ನು ಭರಿಸುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಯ ರೆಫರಲ್ ಇಲ್ಲದೆ ನೇರವಾಗಿ ಖಾಸಗಿ ಆಸ್ಪತ್ರೆಗೆ ಹೋಗಲು ಇಚ್ಛಿಸುವ ರೋಗಿಯು ಚಿಕತ್ಸೆಯ ವೆಚ್ಚವನ್ನು ಸ್ವತಃ ತಾನೇ ಭರಿಸಬೇಕಾಗುತ್ತದೆ.

ಬಿಪಿಎಲ್ ಮತ್ತು ಎಪಿಎಲ್ ವರ್ಗದವರೂ ಸೇರಿದಂತೆ, ವಲಸೆ ಕಾರ್ಮಿಕರು ಮತ್ತು ಪಡಿತರ ಕಾರ್ಡ್ ಹೊಂದಿಲ್ಲದ ಅಂತರ್ ರಾಜ್ಯದಿಂದ ಮರಳಿದ ಕೋವಿಡ್ ಪಾಸಿಟಿವ್ ರೋಗಿಗಳನ್ನು ಮಾರಕ ಸಾಂಕ್ರಾಮಿಕ ಪರಿಸ್ಥಿತಿಯ ದೃಷ್ಟಿಯಿಂದ ಅರ್ಹರೆಂದು ಪರಿಗಣಿಸಲಾಗುತ್ತದೆ.

ನೇತ್ರಚಿಕಿತ್ಸಾ ಆಸ್ಪತ್ರೆಗಳು ಮತ್ತು ದಂತ ಆರೈಕೆ ಆಸ್ಪತ್ರೆಗಳನ್ನು ಹೊರತುಪಡಿಸಲಾಗಿದ್ದು, ಸದರಿ ಆಸ್ಪತ್ರೆಗಳನ್ನು ಕೊವಿಡ್-19 ಚಿಕಿತ್ಸೆಗೆ ಅಧಿಸೂಚಿತಗೊಳಿಸಿರುವುದಿಲ್ಲ. ಎಲ್ಲ ಖಾಸಗಿ ಆಸ್ಪತ್ರೆಗಳು, ಕಾರ್ಪೊರೇಟ್ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳು ಹಾಸಿಗಳನ್ನು ಸರ್ಕಾರದೊಂದಿಗೆ ಕಡ್ಡಾಯವಾಗಿ ಹಂಚಿಕೊಳ್ಳಬೇಕಾಗಿದೆ.

ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್ ನೋಡಲ್ ಏಜನ್ಸಿಯಾಗಿದ್ದು, ಈ ಸಂಸ್ಥೆಯು ಅಧಿಸೂಚಿತ ಖಾಸಗಿ ಆಸ್ಪತ್ರೆಗಳಲ್ಲಿ ವಿನಂತಿಸಲಾದ ಹಾಸಿಗೆ ಸಾಮರ್ಥ್ಯವನ್ನು ಲೆಕ್ಕ ಹಾಕುತ್ತದೆ. ಎಲ್ಲಾ ಖಾಸಗಿ ಆಸ್ಪತ್ರೆಗಳು ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್ ವೆಬ್ ಪೋರ್ಟಲ್‌ನಲ್ಲಿ ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ.

ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ: 1800 425 8330 & 1800 425 2646 ಗೆ ಕರೆಮಾಡಬಹುದಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೂನ್ 25 ರಂದು ನೀರಿನ ಅದಾಲತ್

ಜೂನ 24 (ಕರ್ನಾಟಕ ವಾರ್ತೆ):

ಬೆಂಗಳೂರು ಜಲಮಂಡಲಿಯು ಜೂನ್ 25 ರಂದು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಉಪವಿಭಾಗಗಳಲ್ಲಿ ನೀರಿನ ಅದಾಲತ್‌ನ್ನು ಹಮ್ಮಿಕೊಂಡಿದೆ.

ದಕ್ಷಿಣ ವಿಲೇಜ್-2 ಉಪವಿಭಾಗದ ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು ದೂರವಾಣಿ ಸಂಖ್ಯೆ : 9845444090. ಆಗ್ನೇಯ -5 ಕಪಿಲ ಭವನ, 1ನೇ ಮಹಡಿ, 4ನೇ ಟಿ ಬ್ಲಾಕ್, ಜಯನಗರ. 22945148. ಪಶ್ಚಿಮ ವಿಲೇಜ್-14ನೇ ಬ್ಲಾಕ್, ಬಿ.ಎಸ್.ಕೆ 6ನೇ ಹಂತ, ಪವನಪುರ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಎದುರು, ಲಿಂಗಧೀರನಹಳ್ಳಿ, 9845444063 ನೈರುತ್ಯ-4, ಮೊದಲನೇ ಮಹಡಿ, ಬನಗಿರಿನಗರ, ವಾಟರ್ ಟ್ಯಾಂಕ್ ಪಕ್ಕ, ಬನಶಂಕರಿ 3ನೇ ಹಂತ. 22945198. ಪೂರ್ವ

ವಿಲೇಜ್–3 ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು,ಹೊಸ ರಸ್ತೆ, ಅರಳೂರು, 9591987951 . ಪೂರ್ವ ವಿಲೇಜ್–1 ಬಂಜಾರ ಲೇಔಟ್,ಎಸ್.ಟಿ.ಪಿ ಆವರಣ, ಹೊರಮಾವು. 9591987951. ವಾಯುವ್ಯ–5 ಶ್ರೀರಾಮ ಡಿಲಕ್ಸ್ ಹೋಟೆಲ್ ಹಿಂಭಾಗ, ಪೀಣ್ಯ 2ನೇ ಹಂತ, ಬಿಎಂಟಿಸಿ ಬಸ್ ನಿಲ್ದಾಣ. 28372030 . ಈಶಾನ್ಯ –3 ನಂ.3, ಪಿ&ಟಿ ಕಾಲೋನಿ, ಆರ್.ಟಿ.ನಗರ22945139 ಮತ್ತು (ಉತ್ತರ–1) 8ನೇ ಮುಖ್ಯ ರಸ್ತೆ, 'ಡಿ' ಬ್ಲಾಕ್, ಸಹಕಾರನಗರ 9845444123 ಉಪವಿಭಾಗಗಳಲ್ಲಿ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ : ದಕ್ಷಿಣ ವಿಲೇಜ್–2 ಕೂಡ್ಲು, ಬೇಗೂರು. ಆಗ್ನೇಯ –5 ಜೆ.ಪಿ.ನಗರ–1 &3, ಜಯನಗರ 4ನೇ ಟಿ ಬ್ಲಾಕ್, ಜಯನಗರ 4ನೇ ಬ್ಲಾಕ್, ಹೊಂಬೇಗೌಡನಗರ, ಭೈರಸಂದ್ರ, ಪಶ್ಚಿಮ ವಿಲೇಜ್–1 ಲಿಂಗಧೀರನಹಳ್ಳಿ, ಹೆಮ್ಮಿಗೆಪುರ. ನೈರುತ್ಯ–4ಬಿ.ಎಸ್.ಕೆ 1 &2, ಕುಮಾರಸ್ವಾಮಿ ಲೇಔಟ್.ಇಸ್ರೋ ಲೇಔಟ್, ಪೂರ್ಣಪ್ರಜ್ಞಾ ಲೇಔಟ್, ಅರಳೂರು, ದೊಡ್ಡ ಕಣ್ಣನಹಳ್ಳಿ. ಪೂರ್ವ ವಿಲೇಜ್–1 ಐ.ಎಸ್.ಪಿ.ಎಸ್, ಹೊರಮಾವು,ರಾಜಾಕೆನಲ್. ವಾಯುವ್ಯ–5 ಪೀಣ್ಯ ದಾಸರಹಳ್ಳಿ, ಪೀಣ್ಯ,ಲಿಂಗಧೀರನಹಳ್ಳಿ,ಅಂದರಹಳ್ಳಿ. ಈಶಾನ್ಯ –3 ಆರ್.ಟಿ.ನಗರ, ಕಾವಲ್ ಬೈರಸಂದ್ರ, ಸಂಜಯನಗರ, ಬಿ.ಇ.ಎಲ್ ರಸ್ತೆ. ಉತ್ತರ–1 ಸಹಕಾರನಗರ, ಜಕ್ಕೂರು, ಕೆಂಪಾಪುರ (ಕಾಫಿ ಬೋರ್ಡ್ ಲೇಔಟ್)

ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ನೀರಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದು. ಕೋವಿಡ್–19 ರ ಮಾರ್ಗದರ್ಶನದಂತೆ ಸಭೆಗೆ ಹಾಜರಾಗಲಿರುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕು ಎಂದು ಬೆಂಗಳೂರು ಜಲಮಂಡಲಿಯ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## BWSSB - Water Adalath

**Bengaluru, June 24 (Karnataka Information) :**

BWSSB water Adalath is held on 25.06.2020 in a AEE (South Village-2), (South East-5), (West Village-1), (South West -4), (East Village-3), (East Village-1), (North West-5), (North East-3), and (North -1) sub divisions from 9:30.am to 11.00 am to settle the grievances concerned with the

water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| (South Village-2) | Central Jail Road, Koodlu GLR , Koodlu | 9845444090 |
| (South East-5) | Kapila Bhavan, 1st floor, 4th 'T' Block, Jayanagar | 22945148 |
| (West Village-1) | 4th Block, BSK 6th Stage, Pavanapura, opp Raghavendra Swamy Temple, Lingadeeranahalli | 9845444063 |
| (South West -4) | 1st floor, Banagiri Nagar, Near Water Tank, Banashankari 3rd Stage. | 22945198 |
| (East Village-3) | Central Jail Road, Koodlu GLR , Koodlu, New Road, Aralur | 9591987951 |
| (East Village-1) | Banjara Layout, STP Plant, Horamavu | 7975488206 |
| (North West-5) | Peenya 2nd Stage, Behind Sriram Deluxe Hotel, Peenya 2nd Stage, BMTC Bus Stop | 28372030 |
| (North East-3) | No.3, P&T Colony, RT Nagar | 22945139 |
| (North -1) | 8th Main Road, 'D' Block, Sahakar Nagar | 9845444123 |

**The details of service stations coming under the subdivisions mentioned above are as follows:**

| Sub-division | Service Stations |
|---|---|
| (South Village-2) | Koodlu, Begur |
| (South East-5) | JP Nagar 1 &3, Jayanagar 4th 'T' Block, Jayanagar 4th Block, Hombegowda nagar, Byrasandra |
| (West Village-1) | Lingadeeranahalli, Hemmigepura |
| (South West -4) | BSK 1&2, Kumaraswamy Layout, Isro layout, Poorna Pragna layout, |
| (East Village-3) | Araluru, Doddakannanahalli |
| (East Village-1) | ISPS Horamavu , Rajacanal |
| (North West-5) | Peenya Dasarahalli, Peenya, Lingadeeranahalli, Andrahalli |

| | |
|---|---|
| (North East-3) | RT Nagar, Kaval Byarasandra, Sanjayanagar, BEL Road |
| (North -1) | Sahakar Nagar, Jakkur, Kempapura (coffee Board Lay out) |

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888.Public can utilize this adalath facilities to solve the problems regarding water supply. And public are requested to follow all precautionary measures according to **COVID-19** guidelines while attending the adalath says PRO BWSSB to press.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜುಲೈ ೮ರ ವರೆಗೆ. ವಿಸ್ತರಣೆ**

ಬೆಂಗಳೂರು, ಜೂನ 24 (ಕರ್ನಾಟಕ ವಾರ್ತೆ):

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ೨೦೦೯ರ ಅನ್ವಯ ೨೦೨೦-೨೧ನೇ ಸಾಲಿಗೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ದಾಖಲಾತಿಗೆ ಆನ್‌ಲೈನ್‌ಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಜುಲೈ ೮ ರ ವರೆಗೆ ವಿಸ್ತರಿಸಲಾಗಿದೆ. ಆಸಕ್ತ ಪೋಷಕರು ಇಲಾಖಾ ವೆಬ್‌ಸೈಟ್ http://www.schooleducation.kar.nic.in ರಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಾದೇಶಿಕ ಭಾಷೆಗಳಿಗೆ ಯುಜಿಸಿ ಆದ್ಯತೆ ನೀಡಲಿ : ನಾಗಾಭರಣ

ಬೆಂಗಳೂರು, ಜೂನ 24 (ಕರ್ನಾಟಕ ವಾರ್ತೆ):

**ಯುಜಿಸಿ ಅಧ್ಯಾಪಕರಿಗೆ ಪುನಶ್ಚೇತನ ಶಿಬಿರಗಳ ಸಂಬಂಧ ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಪ್ರಾದೇಶಿಕ ಭಾಷೆಗಳ ಬದಲಿಗೆ 'ಇಂಡಿಯನ್ ಲಿಟ್ರೇಚರ್ ಅಂಡ್ ಕಲ್ಚರ್' ಎಂದು ಬದಲಾಯಿಸಿರುವುದು ಪ್ರಾದೇಶಿಕ ಭಾಷೆಗಳ ಕಲಿಕೆ, ಬೋಧನೆ ಹಾಗೂ ಬೆಳವಣಿಗೆಗೆ ವಿರುದ್ಧವಾದ ನಡೆಯಾಗಿದ್ದು, ಕೂಡಲೇ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವಂತೆ**

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್.ನಾಗಾಭರಣ ಅವರು ಒತ್ತಾಯಿಸಿದ್ದಾರೆ.

ಕನ್ನಡ (ಪ್ರಾದೇಶಿಕ ಭಾಷೆಯಲ್ಲಿ) ಅಧ್ಯಾಪಕರ ಸ್ಥಾನೀಕರಣಕ್ಕೆ ಆಯಾ ಪ್ರಾದೇಶಿಕ ಭಾಷೆಗಳಲ್ಲಿ (ಕನ್ನಡ) ಪುನಶ್ಚೇತನ ಶಿಬಿರಗಳನ್ನು ನಡೆಸುವುದು ಅಗತ್ಯ ಹಾಗೂ ಅನಿವಾರ್ಯವಾಗಿದೆ. ಆದರೆ ಯುಜಿಸಿಯ ನಿಯಮಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಪುನಶ್ಚೇತನ ಶಿಬಿರಗಳನ್ನು ನಡೆಸಲು ಅವಕಾಶವಿಲ್ಲವೆಂದು ರಾಜ್ಯದ ಕನ್ನಡ ಪ್ರಾಧ್ಯಾಪಕರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಂದೆ ತಮ್ಮ ಅಳಲು ತೋಡಿಕೊಂಡಿದ್ದು, ಈ ಸಂಬಂಧ ಕ್ರಮಕೈಗೊಳ್ಳುವಂತೆ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಸೂಚಿಸಿದ್ದಾರೆ.

ಆಧುನಿಕ ಭಾರತೀಯ ಭಾಷೆಗಳು ಎಂಬುದರ ಬದಲಿಗೆ ಅದನ್ನು ಯುಜಿಸಿ "ಪ್ರಾದೇಶಿಕ ಭಾಷೆಗಳು'' ಎಂದು ನಮೂದಿಸಬೇಕಿದೆ. ಆ ಮೂಲಕ ಭಾರತೀಯ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಪೂರಕ ವಾತಾವರಣವನ್ನು ಉನ್ನತ ಶಿಕ್ಷಣದ ಮೂಲಕ ರೂಪಿಸಬೇಕಿದೆ. ಇಲ್ಲವಾದಲ್ಲಿ ಮುಂದಿನ ಪೀಳಿಗೆ ಮಾತೃಭಾಷೆಯನ್ನು ಕಳೆದುಕೊಳ್ಳುವುದರ ಜೊತೆಗೆ ತನ್ನ ಸಂಸ್ಕೃತಿ, ಪರಂಪರೆ, ಸಾಹಿತ್ಯ ಮುಂತಾದವುಗಳಿಂದ ವಂಚಿತರಾಗುವ ಆತಂಕವಿದೆ. ಹಾಗಾಗಿ ಈ ಎಲ್ಲ ಮಾಹಿತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಮೂಲಕ ರಾಜ್ಯದ ಅಧಿಕೃತ ಆಡಳಿತ ಭಾಷೆಯಾದ ಕನ್ನಡದಲ್ಲಿ ಪುನಶ್ಚೇತನ ಶಿಬಿರಗಳನ್ನು ನಡೆಸಲು ತುರ್ತು ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿ ನೀಡುವಂತೆ ಪ್ರಾಧಿಕಾರದ ಅಧ್ಯಕ್ಷರು ಆಯೋಗಕ್ಕೆ ಪತ್ರ ಮುಖೇನ ಆಗ್ರಹಿಸಿದ್ದಾರೆ.

ಸಿಬಿಸಿಎಸ್ ಪಠ್ಯಕ್ರಮವನ್ನು ಅಳವಡಿಸುವ ಸಂದರ್ಭದಲ್ಲಿನ ಗೊಂದಲಗಳಿಂದಾಗಿ ರಾಜ್ಯದ ಅನೇಕ ವಿಶ್ವವಿದ್ಯಾಲಯಗಳು ರಾಜ್ಯದ ಅಧಿಕೃತ ಭಾಷೆಯಾದ ಕನ್ನಡಕ್ಕೆ ಕಡಿಮೆ ಕೃಪಾಂಕಗಳನ್ನು ನೀಡಿ ಆಂಗ್ಲಭಾಷೆಯನ್ನು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಮೇಲೆ ಒತ್ತಾಯ ಪೂರ್ವಕವಾಗಿ ಹೇರಲಾಯಿತು. ಅಲ್ಲದೆ ಕನ್ನಡದ ಸಿಬಿಸಿಎಸ್ ಪಠ್ಯ ವಿನ್ಯಾಸ ಮತ್ತು ಪಠ್ಯಕ್ರಮವನ್ನು ಯುಜಿಸಿ ತನ್ನ ವೆಬ್ಸೈmï£À°è ಅಳವಡಿಸದೇ ಇರುವುದರಿಂದ ರಾಜ್ಯದ ಉದ್ದಗಲಕ್ಕೂ ಕನ್ನಡ ಪಠ್ಯ ಬೋಧನೆ ಮಾಡುವ ಪ್ರಾಧ್ಯಾಪಕರ ವೃಂದ ಸಾಕಷ್ಟು ಗೊಂದಲಕ್ಕೆ ಒಳಗಾಗಿರುವುದನ್ನು ಗಮನಿಸಬಹುದು.

ಆಯ್ಕೆ ಆಧಾರಿತ ಗುಣಾಂಶಗಳನ್ನು ನೀಡುವ ಪದ್ಧತಿಯಲ್ಲಿ ಇಂಗ್ಲಿಷ್/ಆಧುನಿಕ ಭಾರತೀಯ ಭಾಷೆಗಳು ಎಂಬ ಅವಕಾಶ ನೀಡಿರುವುದರಿಂದ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ಇಂಗ್ಲಿಷನ್ನು ಒಂದು ಭಾಷೆಯಾಗಿ ಕಡ್ಡಾಯಗೊಳಿಸಿದವು. ಯುಜಿಸಿಯ ಈ ಕ್ರಮ ಪ್ರಾದೇಶಿಕ ಭಾಷೆಯ ಹಿನ್ನಡೆಗೆ ಕಾರಣವಾಗಿದೆ ಎಂದು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.